| | | | |
|---|---|---|---|
| 11. | ಸಿರಗುಪ್ಪ | 37. | ಖಾನಾಪುರ |
| 12. | ಬಳ್ಳಾರಿ | 38. | ಬೆಳಗಾಂ |
| 13. | ಚಳ್ಳಕೆರೆ | 39. | ಹುಕ್ಕೇರಿ |
| 14. | ಹಿರಿಯೂರು | 40. | ಚಿಕ್ಕೋಡಿ |
| 15. | ಮೊಳಕಾಲ್ಮೂರು | 41. | ಅಥಣಿ |
| 16. | ಗೌರಿಬಿದನೂರು | 42. | ಹುಮ್ನಾಬಾದ್ |
| 17. | ಮಾಲೂರು | 43. | ಬಸವಕಲ್ಯಾಣ |
| 18. | ಗುಡಿಬಂಡೆ | 44. | ಔರಾದ್ |
| 19. | ಬಾಗೇಪಲ್ಲಿ | 45. | ಭಾಲ್ಕಿ |
| 20. | ಚಿಂತಾಮಣಿ | 46. | ಬೀದರ್ |
| 21. | ಶ್ರೀನಿವಾಸಪುರ | 47. | ಅಳಂದ |
| 22. | ಮುಳಬಾಗಿಲು | 48. | ಸೇಡಂ |
| 23. | ಬಂಗಾರಪೇಟೆ | 49. | ಯಾದಗೀರ್ |
| 24. | ಆನೇಕಲ್ | 50. | ಚಿಂಚೋಳಿ |
| 25. | ಹೆಚ್.ಡಿ. ಕೋಟೆ | 51. | ಅಫಜಲ್‌ಪುರ |
| 26. | ಕೊಳ್ಳೇಗಾಲ | 52. | ಶಹಾಪುರ |

**865. ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ)** ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಆಹಾರ ಪಾರ್ಕುಗಳು ರಾಜ್ಯದಲ್ಲಿ ಎಷ್ಟು ಇವೆ ಮತ್ತು ಅವು ಎಲ್ಲಿವೆ.

(ಆ) ಆಹಾರ ಪಾರ್ಕ್‌ಗಳ ಸ್ಥಾಪನೆಯ ಉದ್ದೇಶವೇನು;

(ಇ) ರಾಜ್ಯದಲ್ಲಿ 2007–08ನೇ ಸಾಲಿನಲ್ಲಿ ಎಷ್ಟು ಆಹಾರ ಪಾರ್ಕುಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

(ಈ) ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಆಹಾರ ಪಾರ್ಕ್ ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

(ಉ) ಒಂದು ಆಹಾರ ಪಾರ್ಕಿಗೆ ಸರ್ಕಾರದ ಎಷ್ಟು ಅನುದಾನವನ್ನು ಬಿಡುಗಡೆ ಮಾಡುತ್ತದೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಮಾನ್ಯ ಭಾರಿ ಮಧ್ಯಮ ಕೈಗಾರಿಕಾ ಸಚಿವರು)**

(ಅ) ರಾಜ್ಯದಲ್ಲಿ ಒಟ್ಟು ಆರು(4) ಆಹಾರ ಪಾರ್ಕುಗಳನ್ನು ಸ್ಥಾಪಿಸಲು ಕೇಂದ್ರದ ಅನುಮತಿ ದೊರೆತಿದ್ದು, ಈ ನಾಲ್ಕು ಪಾರ್ಕುಗಳು ಮಾಲೂರು, ಕೋಲಾರ ಜಿಲ್ಲೆ; ಹಿರಿಯೂರು, ಚಿತ್ರದುರ್ಗ ಜಿಲ್ಲೆ; ಬಾಗಲಕೋಟೆ, ಬಾಗಲಕೋಟೆ ಜಿಲ್ಲೆ; ಜೇವರ್ಗಿ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಸ್ಥಾಪನೆಯಾಗುತ್ತಿವೆ.

(ಆ) ಆಹಾರ ಪಾರ್ಕ್‌ಗಳ ಸ್ಥಾಪನೆಯ ಮುಖ್ಯ ಉದ್ದೇಶ ವ್ಯವಸಾಯ ಮತ್ತು ತೋಟಗಾರಿಕೆಯಲ್ಲಿ ಬೆಳೆದ ಆಹಾರ ಪದಾರ್ಥಗಳ ಸಂಸ್ಕರಣೆ ಮಾಡುವ ಉದ್ಯಮಿಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ಶೈತ್ಯಾಗಾರ, ಗ್ರೇಡಿಂಗ್, ಸಪರೇಟಿಂಗ್, ಪ್ರೋಸೆಸಿಂಗ್, ಪ್ಯಾಕಿಂಗ್, ನೀರಿನ ಸರಬರಾಜು ಮುಂತಾದ ಸೌಲಭ್ಯಗಳನ್ನು ಒದಗಿಸುವುದಾಗಿದ್ದು ಮತ್ತು ಅದಕ್ಕೆ ಬೇಕಾದ ವಿದ್ಯುತ್‌ಚ್ಛಕ್ತಿ, ಕೊಳಚೆ ಶುದ್ದೀಕರಣ ಘಟಕ ಮುಂತಾದ ಸೌಲಭ್ಯಗಳನ್ನು ಸಹ ಒದಗಿಸುವುದು ಮತ್ತು ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗುವ ನಿಟ್ಟಿನಲ್ಲಿ ಸಹಕರಿಸುವುದಾಗಿರುತ್ತದೆ.

(ಇ) ಭಾರತ ಸರ್ಕಾರದ ಅನುದಾನವು ಮಾರ್ಚಿ 2007ರಂದು ಮುಕ್ತಾಯವಾಗಿದ್ದು, ಈ ಯೋಜನೆಯನ್ನು ಮುಂದುವರಿಸುವ ಬಗ್ಗೆ ತಿಳಿದುಬಂದಿಲ್ಲ. ಈ ಬಗ್ಗೆ ಭಾರತ ಸರ್ಕಾರದ ನಿಲುವನ್ನು ಪ್ರಕಟಿಸಿದ ನಂತರ ಹೊಸ ಆಹಾರ ಪಾರ್ಕುಗಳನ್ನು ಸ್ಥಾಪಿಸುವ ಬಗ್ಗೆ ಯೋಚಿಸಲಾಗುವುದು.

(ಈ) ಮೇಲೆ ಹೇಳಿದಂತೆ ಭಾರತ ಸರ್ಕಾರದ ಫುಡ್ ಪಾರ್ಕ್ ಯೋಜನೆಯು ಮಾರ್ಚಿ 2007 ರಲ್ಲಿ ಮುಕ್ತಾಯವಾಗಿದ್ದ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯಲ್ಲಿ ಆಹಾರ ಪಾರ್ಕ್ ಸ್ಥಾಪನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

(ಉ) ಮಾರ್ಚಿ 2007 ವರೆವಿಗೆ ಲಭ್ಯವಿರುವ ನಿಯಮಾವಳಿಯ ಪ್ರಕಾರ ಒಂದು ಆಹಾರ ಪಾರ್ಕಿಗೆ ಕೇಂದ್ರ ಸರ್ಕಾರದಿಂದ ರೂ. 400 ಲಕ್ಷಗಳು ಮತ್ತು ರಾಜ್ಯ ಸರ್ಕಾರದಿಂದ ರೂ. 400 ಲಕ್ಷಗಳ ಅನುದಾನವು ಲಭ್ಯವಿರುತ್ತದೆ.

**836. ಶ್ರೀ ಧ್ರುವನಾರಾಯಣ ಆರ್.** (ಸಂತೇಮರಹಳ್ಳಿ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–